


■ ಕಂನಾಡಿಗಾ ನಾರಾಯಣ
ಕಲೆ: ಎಚ್.ಎಸ್. ಮೋನಪ್ಪ



# ಮಹಾವೃಕ್ಷದ ನೆರಳಲ್ಲಿ ರಕ್ಷಣೆ-ಭಕ್ಷಣೆಯ ಬೃಹನ್ನಾಟಕ

ಗಾಂಧಿಯವರು ತಮ್ಮ ಅಧಿಕೃತ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ವಾಪಸ್ಸು ಬೆಂಗಳೂರಿಗೆ ಬರುವಾಗ ಅಲ್ಲಲ್ಲಿ ಗೋಡೆ ಮೇಲೆ ಅಂಟಿಸಿದ್ದ ಕಲ್ಲಚ್ಚಿನ ಪೋಸ್ಟರುಗಳನ್ನು ಕಂಡರು. ತಮ್ಮ ಆಗಮನದ ಸ್ವಾಗತಕ್ಕೆ ಹಾಕಿರುವುದೆಂದು ಮೊದಲು ಭಾವಿಸಿದರೂ, ಅದರಲ್ಲಿ ಬರೆದಿರುವ ಕನ್ನಡವನ್ನು ಓದಲಾಗದೇ ಡ್ರೈವರನನ್ನು ಕೇಳಿದರು. ಆತ ಅದು ಜೂನಿಯರ್ ಗಾಂಧಿಯ ಭಾಷಣದ ಬಗ್ಗೆ ಇರುವ ಪೋಸ್ಟರ್ ಎಂದು ಹೇಳಿದಾಗ ಕುತೂಹಲ ಇನ್ನಷ್ಟು ಹೆಚ್ಚಾಯಿತು. ಈ ಹಿಂದೆ ಅನೇಕ ಬಾರಿ ಹೀಗೊಬ್ಬ ಅಭಿನವ ಗಾಂಧಿ ಗ್ರಾಮೀಣ ಕರ್ನಾಟಕದಲ್ಲಿ ಗಾಂಧಿ ವಿಚಾರಧಾರೆಯನ್ನು ಪಸರಿಸುತ್ತಿರುವ ವಿಚಾರವನ್ನು ಕೇಳಿ ತಿಳಿದುಕೊಂಡಿದ್ದರೂ, ಈಗ ಆತನನ್ನು ಕಾಣುವ ಇಂಗಿತ ವ್ಯಕ್ತಪಡಿಸಿದರು. ಈಗಾಗಲೇ ರಾತ್ರಿಯಾಗಿರುವುದರಿಂದ ಮತ್ತಾವುದೇ ಕಾರ್ಯಕ್ರಮದ ತುರ್ತು ಇರದುದರಿಂದ ಕಸ್ತೂರ್ ಬಾ ಅವರೂ ಸಮ್ಮತಿಸಿದರು.

ಯಾರಿಗೂ ತಾವು ಬಂದಿರುವ ವಿಚಾರ ತಿಳಿಯದಂತೆ ಆತನನ್ನು ಭೇಟಿ ಮಾಡಿಸು ಎಂದರು. ಅಂಗರಕ್ಷಕ ಕೂಡ ಡ್ರೈವರನ ಜತೆ ಸಮನ್ವಯಿಸಿ, ಅವರಿವರನ್ನು ಕೇಳಿ ಮುದ್ದುವೀರಪ್ಪನ ಮನೆ ಎಲ್ಲಿರುವುದೆಂದು ತಿಳಿದುಕೊಂಡು ಸೀದಾ ಇಲ್ಲಿಗೇ ಬಂದರು. ನನ್ನ ಬುಡದಲ್ಲಿಯೇ ಕಾರನ್ನು ನಿಲ್ಲಿಸಿ ಇಳಿದರು. ಆಗಲೇ ರಾತ್ರಿ ಹನ್ನೆರಡೂವರೆಯಾಗಿತ್ತು.

ಬೆಳಗ್ಗಿನಿಂದ ಎಲ್ಲೆಲ್ಲಿಗೋ ನಡೆದು ಭಾಷಣ ಮಾಡಿ ದಣಿದು ಬಂದಿದ್ದ ಮುದ್ದುವೀರಪ್ಪ, ದುಡಿಯುವ ಹೋರಿಗಳು ದಷ್ಟಪುಷ್ಟವಾಗಿರಲಿ ಎಂದು ಜೋಳದ ಸಪ್ಪೆಯನ್ನು ಬಾಯಿಗೆ ಇಟ್ಟು ಬಲವಂತವಾಗಿ ತಿನ್ನಿಸಿ, ಕೊಟ್ಟಿಗೆಯ ಅಟ್ಟವನ್ನು ಏರಿ ಮಲಗಿಬಿಟ್ಟಿದ್ದ. ದನಗಳು ಬೆಳಗ್ಗಿನಿಂದ ತಿಂದದ್ದನ್ನು ಮೆಲುಕು ಹಾಕುತ್ತಾ, ಆಗಾಗ್ಗೆ ಬಿಸಿಯುಸಿರನ್ನು ಹೊರಹಾಕುತ್ತಿದ್ದರೂ ಅದಾವುದರ ಪರಿವೇ ಇಲ್ಲದಂತೆ ಸಾಕ್ಷಾತ್ ಶ್ರೀಮನ್ನಾರಾಯಣನಂತೆ ಪವಡಿಸಿಬಿಟ್ಟಿದ್ದ.

ಮಲಗಿರುವ ಆತನ ನಿದ್ರೆಗೆ ಭಂಗ ತರಬಾರದೆಂತಲೂ, ತಾವು ಮಾತ್ರ ಆತನ ದರ್ಶನ ಪಡೆದು ಹೊರಡುವುದಾಗಿಯೂ ಗಾಂಧಿ ಮೊದಲೇ ಹೇಳಿದ್ದರಿಂದ ಸಹಾಯಕರು ಆತನನ್ನು ಎಬ್ಬಿಸಲು ಹಿಂಜರಿದರು. ಸೊಳ್ಳೆಯ ಕಾಟಕ್ಕೆ ಮೈತುಂಬ ರಗ್ಗನ್ನು ಹೊದ್ದುಕೊಂಡಿದ್ದರಿಂದ ತಿರುಗಿ ಮಲಗಿದ್ದ ಆತನ ಮುಖದರ್ಶನ ಸಾಧ್ಯವಾಗಲಿಲ್ಲ. ಆಗ ಗಾಂಧಿಯೇ ಈ ಕಡೆ ಹೊರಳಿಸಿರೆಂದು ಹೇಳಿದ್ದರಿಂದ ಅಲುಗಾಡಿಸಿ ಇತ್ತ ತಿರುಗುವಂತೆ ಮಾಡಿದರು. ಆದರೇನು? ಮುಖ ಮುಚ್ಚಿಕೊಂಡಿದ್ದಾನೆ. ಗಾಂಧಿಗೆ, ಈತ ತನ್ನನ್ನೇ ಹೀಗೆ ಆಟ ಆಡಿಸುತ್ತಿದ್ದಾನಲ್ಲ ಅನ್ನಿಸಿರಬೇಕು. ಮುಖದ ಪರದೆ ಸರಿಸುವಂತೆ ಸನ್ನೆ ಮಾಡಿದರು. ಮುಖದ ಮೇಲೆ ದೀಪದ ಬೆಳಕನ್ನು ಬೀರಿದರು. ಓಹ್... ಅದೇ ಮುಖ! ಗಾಂಧಿಯೇ ಒಮ್ಮೆ ಹೌಹಾರಿದರು. ಗಾಂಧಿ ತಮ್ಮ ತಂದೆಯ ಬಗ್ಗೆ ಅನುಮಾನಪಟ್ಟರೆ, ಕಸ್ತೂರ್ ಬಾ ಸ್ವತಃ ಗಾಂಧಿಯ ಬಗ್ಗೆಯೇ